ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
ಸಿ.ಸಿ.**1947/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಸೋಮಣ್ಣ ಎಸ್. | ಪ್ರಾಸಾ -7 |
| ತಂದೆಯ ಹೆಸರು | : ಶಂಕರಪ್ಪ | ಚಾಸಾ-11 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : KSRTC ಬಸ್ ನಿರ್ವಹಾಕ | ದಿನಾಂಕಃ29.01.2025 |
| ವಾಸಸ್ಥಳ | : ಮೂಡಿಗೆರೆ | |

:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಅವರು ನಮ್ಮ ಇಲಾಖೆಯ ಬಸ್ ಚಾಲಕರು. ಚಾಸಾ-12 ರವರು ಸಹಾ ನಮ್ಮ ಇಲಾಖೆಯ ಬಸ್ ಚಾಲಕರು.

ಸಾಕ್ಷಿಯು ನಿಪಿ-14 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-2 ಮತ್ತು ನಿಪಿ-15 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ನಿಪಿ-14 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು.

1 ವರ್ಷದ ಹಿಂದೆ ರಾ.7.00 ರಿಂದ 7.30 ರ ಸಮಯಕ್ಕೆ ಮೂಡಿಗೆರೆ ಪೋಲಿಸ್ ಠಾಣೆ ಎದುರು ನಿಪಿ-14 ಕ್ಕೆ ಸಹಿ ಮಾಡಿದ್ದು, ನಿಪಿ-2 ಮತ್ತು ನಿಪಿ-15 ರ ಪೋಟೋಗಳನ್ನು ಅಲ್ಲಿಯೇ ತೆಗೆಯಲಾಗಿದೆ. KSRTC ಬಸ್ ಗೆ ಅಪಘಾತದ ಸಂಬಂಧ ಸದರಿ KSRTC ಬಸ್ ನ್ನು ಪೋಲಿಸರು ವಶಕ್ಕೆ ಪಡೆದ ಬಗ್ಗೆ ನಿಪಿ-14 ಕ್ಕೆ ಸಹಿ ಮಾಡಿದ್ದೇನೆ. ಸದರಿ ಬಸ್ ನ ನೋ.ಸಂ.KA-40-F-0506 ಆಗಿದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:

ದಿ.13.08.2023 ರಂದು ಪೋಲಿಸರು ನನಗೂ ಮತ್ತು ಚಾಸಾ-12 ರವರಿಗೂ ನೋಟಿಸು ಕೊಟ್ಟು ಕರೆದಿದ್ದರು ಎಂದರೆ ಸರಿಯಲ್ಲ. ಪಂಚನಾಮೆಯನ್ನು ಸ.7.00 ರಿಂದ 7.45 ರವರೆಗೂ ಬರೆಯಾಲಗಿದೆ ಎಂದರೆ ಸರಿ.

ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ

ನಿಪಿ-14 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ನಾನು ಪೋಲಿಸರ ಕೋರಿಕೆಯಂತೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೋಟೋಗಳನ್ನು ಯಾರು ತೆಗೆದರು ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.